# Key Answer

ವಿಷಯ : ಸಮಾಜ ವಿಜ್ಞಾನ

# ರೂಪಣಾತ್ಮಕ ಪರೀಕ್ಷೆ 3

ಅಂಕಗಳು: 20

ತರಗತಿ: 10ನೇ

ಸಮಯ : ೪೦ ನಿಮಿಷಗಳು

---

**I.**

1. ಮೊದಲನೆಯ ಆಂಗ್ಲೋ ಮೈಸೂರು ಯುದ್ಧ ಹೈದರ್ ಅಲಿ ಮತ್ತು ಬ್ರಿಟಿಷರ ನಡುವೆ ನಡೆಯಿತು.

2. ನದಿಗಳು ಮೆಕ್ಕಲು ಕಣಗಳನ್ನು ಸಂಚಯಿಸುವುದರಿಂದ ಇಂತಹ ಮಣ್ಣು ಉತ್ಪತ್ತಿಯಾಗುತ್ತದೆ.

3. ಬಿದಿರು, ಮರದ ತಿರುಳು ಮತ್ತು ಹುಲ್ಲು ಕಾಗದ ತಯಾರಿಕೆಯಲ್ಲಿ ಬಳಸುವ ಕಚ್ಚಾವಸ್ತುಗಳು.

4. 51ನೇ ವಿಧಿಯಲ್ಲಿ ಅಂತರಾಷ್ಟ್ರೀಯ ಶಾಂತಿ ಮತ್ತು ಸೌಹಾರ್ದತೆಯ ಕುರಿತು ತಿಳಿಸಲಾಗಿದೆ.

**II.**

5. ಒಬ್ಬರ ದುಡಿಮೆಗೆ ಪ್ರತಿಯಾಗಿ ಯಾವುದೇ ರೀತಿಯ ಸಂಭಾವನೆ ಅಥವಾ ವಸ್ತುಗಳ ರೂಪದಲ್ಲಿ, ಯಾವುದೇ ಪ್ರತಿಫಲ ಇಲ್ಲದೇ ದುಡಿಮೆಯ ಚಟುವಟಿಕೆಗೆ ಸಂಭಾವನೆ ರಹಿತ ದುಡಿಮೆ ಎಂದು ಕರೆಯಲಾಗುತ್ತದೆ.

6. ಸಾಮಾನ್ಯ ಸಭೆ, ಭದ್ರತಾ ಸಮಿತಿ, ಆರ್ಥಿಕ ಹಾಗೂ ಸಾಮಾಜಿಕ ಸಮಿತಿ, ದತ್ತಿ ಸಮಿತಿ, ಅಂತರರಾಷ್ಟ್ರೀಯ ನ್ಯಾಯಾಲಯ, ಸಚಿವಾಲಯ.

7. ಕ್ಷಾಮ ಪೀಡಿತ ಭಾಗಗಳಿಗೆ ಆಹಾರ ಧಾನ್ಯ ಮತ್ತು ಮೇವುಗಳನ್ನು ಮತ್ತು ಸೈನ್ಯವನ್ನು ಸ್ಥಳದಿಂದ ಸ್ಥಳಕ್ಕೆ ಒಯ್ಯುವುದು ರೈಲು ಮಾರ್ಗಗಳ ನಿರ್ಮಾಣದ ಉದ್ದೇಶವಾಗಿತ್ತು

**III.**

8. ಸುರಪುರ ಈಗಿನ ಯಾದಗಿರಿ ಜಿಲ್ಲಾ ಕೇಂದ್ರದಿಂದ ಸುಮಾರು 50 ಕಿ.ಮೀ. ದೂರದಲ್ಲಿದೆ. ಮೊಘಲರ ಚಕ್ರವರ್ತಿ ಔರಂಗಜೇಬನ ಕಾಲದಿಂದಲೂ ಇದು ಪ್ರಾಮುಖ್ಯತೆಯನ್ನು ಪಡೆದಿತ್ತು. ನಿಜಾಮ ಮತ್ತು ಮರಾಠರ ಪೇಶ್ವೆಗಳ ಕಾಲದಲ್ಲಿ ಇದು ಒಂದು ಸಾಮಂತ ರಾಜ್ಯವಾಗಿ ಪರಿಣಮಿಸಿತು. ಕಾಲಾನಂತರ ಭೌಗೋಳಿಕ ಪ್ರದೇಶಗಳ ಮೇಲಿನ ಹತೋಟಿಯು ಕುಸಿದು ಕೇವಲ ಸೀಮಿತ ಭೌಗೋಳಿಕ ಪ್ರದೇಶದ ಮೇಲೆ ತನ್ನ ರಾಜಕೀಯ ಸ್ವಾಮ್ಯವನ್ನು ಇದು ಪಡೆದುಕೊಂಡಿತು. ವೆಂಕಟಪ್ಪ ನಾಯಕನ ಕಾಲದಲ್ಲಿ ಸುರಪುರ ಬ್ರಿಟಿಷ್ ವಿರೋಧಿ ಬಂಡಾಯದ ಕಿಚ್ಚನ್ನು ಗಳಿಸಿಕೊಂಡಿತು.

9. ಮಣ್ಣಿನ ಸಾರವು ಕಡಿಮೆಯಾಗಿ, ಕೃಷಿಯ ಉತ್ಪಾದನಾ ಸಾಮರ್ಥ್ಯ ಕಡಿಮೆಯಾಗುತ್ತದೆ. ನದಿ ಪಾತ್ರಗಳಲ್ಲಿ ಹೂಳು ತುಂಬಿಕೊಳ್ಳುವುದು, ಪ್ರವಾಹ ಉಂಟಾಗುವುದು ಮತ್ತು ನದಿ ಪಾತ್ರದ ಬದಲಾವಣೆ ಹಾಗೂ ಜಲಾಶಯಗಳಲ್ಲಿ ನೀರು ಸಂಗ್ರಹಣಾ ಸಾಮರ್ಥ್ಯ ಕಡಿಮೆಯಾಗುತ್ತದೆ. ಅಂತರ್ಜಲದ ಮಟ್ಟದಲ್ಲಿ ಕುಸಿತ ಮತ್ತು ಮಣ್ಣಿನ ತೇವಾಂಶವು ಕಡಿಮೆಯಾಗುವುದು. *ಸಸ್ಯವರ್ಗವು ಒಣಗುತ್ತದೆ ಮತ್ತು ಬರ ಪರಿಸ್ಥಿತಿ ಹೆಚ್ಚುತ್ತದೆ. ದೇಶದ ಸಮಗ್ರ ಆರ್ಥಿಕ ವ್ಯವಸ್ಥೆಗೆ ಹಿನ್ನಡೆಯಾಗುತ್ತದೆ.

**IV.** 10. a) ಹಿರಾಕುಡ್ ಆಣೆಕಟ್ಟು b) ತುತಕುಡಿ ಬಂದರು c) ಬೆಂಗಳೂರು d) ದಿಗ್ಬಾಯಿ




Downloaded from scoringtarget.com